# ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5


ಸಂ : ದೈ.ಶಿ.ವಿ./ 242 /2018–2019

ದಿನಾಂಕ : 31ನೇ ಜುಲೈ 2018


E.mail-dir.deptofphyedn@gmail.com
Ph. No. 0821-2419288


ಗೆ,

ಪ್ರಾಂಶುಪಾಲರುಗಳು/ಆಡಳಿತಾಧಿಕಾರಿಗಳು
ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ
ಎಲ್ಲಾ ಕಾಲೇಜುಗಳು

*ಮಾನ್ಯರೆ,*

*ವಿಷಯ* : ಪ್ರೊ. ಶೇಷಣ್ಣ ದೈಹಿಕ ಶಿಕ್ಷಣ ಮತ್ತು ಕ್ರೀಡೆ ದತ್ತಿಯ ಒಂಭತ್ತನೇ ಉಪನ್ಯಾಸದ ಬಗೆಗೆ.

* * * * *

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ನಿವೃತ್ತಿಗೊಂಡ ಪ್ರೊ. ಶೇಷಣ್ಣರವರ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ಅವರ್ರ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದತ್ತಿ ನಿಧಿಯನ್ನು 2009–2010ನೇ ಸಾಲಿನಿಂದ ಸ್ಥಾಪಿಸಿ, ವಾರ್ಷಿಕ ಉಪನ್ಯಾಸವನ್ನು ಪ್ರಾರಂಭಿಸಲಾಗಿದೆ.

ಪ್ರೊ. ಶೇಷಣ್ಣನವರು ದೈಹಿಕ ಶಿಕ್ಷಣ ಕ್ಷೇತ್ರದಲ್ಲಿ "ಭೀಷ್ಮಾಚಾರ್ಯ" ಮತ್ತು "ನಡೆದಾಡುವ ವಿಶ್ವಕೋಶ" ಎಂದೇ ಚಿರಪರಿಚಿತರಾಗಿದ್ದಾರೆ. ಇವರ ಗಣನೀಯ ಬೋಧನಾ ಕಾರ್ಯವನ್ನು ಗುರುತಿಸಿ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಮತ್ತು ಕಾಲೇಜುಗಳ ದೈಹಿಕ ಶಿಕ್ಷಣ ಅಧ್ಯಾಪಕರ ಸಂಘ 2005ರಲ್ಲಿ "ವಸಿಷ್ಠ" ಪ್ರಶಸ್ತಿಯನ್ನು ಪ್ರಧಾನ ಮಾಡಿದೆ. ಈ ಮಹನೀಯರ ಹೆಸರಿನಲ್ಲಿ ರಾಷ್ಟ್ರದ ಹೆಸರಾಂತ ದೈಹಿಕ ಶಿಕ್ಷಣ ತಜ್ಞರು ಮತ್ತು ಇತರರಿಂದ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವಿದ್ಯಾರ್ಥಿ ಕ್ರೀಡಾಪಟುಗಳಿಗೆ ಉಪಯೋಗವಾಗುವಂತಹ ಉಪನ್ಯಾಸಗಳನ್ನು ಏರ್ಪಡಿಸಲು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗಕ್ಕೆ ವಹಿಸಿರುವುದು ಅತ್ಯಂತ ಶ್ಲಾಘನೀಯವಾದ ವಿಚಾರ.

ಇದರ ಅಂಗವಾಗಿ ಒಂಭತ್ತನೇ ದತ್ತಿ ಉಪನ್ಯಾಸವನ್ನು ದಿನಾಂಕ 6ನೇ ಸೆಪ್ಟಂಬರ್ 2018ರಂದು ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಬೆಳಗ್ಗೆ 10–30 ಘಂಟೆಗೆ ಏರ್ಪಡಿಸಲಾಗಿದೆ. ಉಪನ್ಯಾಸದ ವಿಷಯ **"ಕ್ರೀಡೆ ಮತ್ತು ವ್ಯಕ್ತಿತ್ವ ವಿಕಸನ" "Personality Development and Sports"** ಎಂಬ ವಿಷಯದ ಬಗ್ಗೆ ಅಂತರ ರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ರಾಷ್ಟ್ರದ ಅತ್ಯುತ್ತಮ ತರಬೇತುದಾರರ "ರವಿ ಪುರಸ್ಕಾರ" ಮತ್ತು "ಇಂದಿರಾ ಪ್ರಿಯದರ್ಶಿನಿ" ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು ಅದಂತಹ ಶ್ರೀ ಆರ್.ಎ. ಚೇತನ್‌ರಾಮ್‌ರವರು ಉಪನ್ಯಾಸವನ್ನು ನೀಡುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಟಿ.ಕೆ. ಉಮೇಶ್‌ರವರು ವಹಿಸುವರು.

ಸದರಿ ಉಪನ್ಯಾಸ ಕಾರ್ಯಕ್ರಮಕ್ಕೆ ತಮ್ಮ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು, ಕ್ರೀಡಾ ಕಾರ್ಯದರ್ಶಿ/ವಿದ್ಯಾರ್ಥಿ ಕ್ರೀಡಾ ಪ್ರತಿನಿಧಿಗಳನ್ನು ನಿಯೋಜಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕೆಂದು ಈ ಮೂಲಕ ಕೋರಿಕೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

31/7/2018

ನಿರ್ದೇಶಕರು (ಪ್ರಭಾರ)

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–570005

**ಪ್ರತಿಯನ್ನು ವಂದನಾಪೂರ್ವಕವಾಗಿ ::**

1. ಸನ್ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಗಮನಕ್ಕಾಗಿ
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಗಮನಕ್ಕಾಗಿ
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಗಮನಕ್ಕಾಗಿ
4. ಪ್ರಕಟಣೆಯ ಕೃಪೆಗಾಗಿ ಸುದ್ದಿ ಮಾಧ್ಯಮ ಎಲ್ಲಾ ಸಂಪಾದಕರು/ವರದಿಗಾರರಿಗೆ